ಕೆಳಕ್ಕೆ ಸಕ್ಕ ತಿದ್ದುಪಡಿಯನ್ನು ತಂದು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಜನರಿಗೆ ಸಕ್ರಮ ಗೊಳಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಈ ರೀತಿ ತಿದ್ದುಪಡಿಯಾದ ನಂತರ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು ಇದರಲ್ಲಿ ಸುಮಾರು ಅರ್ಜಿಗಳು ಹಿಂದುಳಿದ ಜನಾಂಗದಿಂದ ಬಂದಿರುತ್ತವೆ.

ಕಲಘಟಗಿ ಕ್ಷೇತ್ರದಲ್ಲಿ ಅಂಗನವಾಡಿ ಕೇಂದ್ರಗಳ ಪ್ರಾರಂಭ ಕುರಿತು.

೪೪೫. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳಲ್ಲಿ ಸರಕಾರದವರು ಅಂಗನವಾಡಿಗಳನ್ನು ಸ್ಥಾಪಿಸಿದ್ದಾರೆ ?

ಆ) ಸ್ಥಾಪಿಸದೇ ಇದ್ದ ಹಳ್ಳಿಗಳಲ್ಲಿ ಯಾವಾಗ ಸ್ಥಾಪಿಸಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಈ ಕ್ಷೇತ್ರವಲ್ಲಿ ಸಮಗ್ರ ಬಾಲವಿಕಾಸ ಯೋಜನೆ ಮಂಜೂರಾಗಿಲ್ಲ. ಆದುದರಿಂದ ಯಾವುದೇ ಹಳ್ಳಿಯಲ್ಲಿ ಅಂಗನವಾಡಿಗಳನ್ನು ತೆರೆದಿರುವುದಿಲ್ಲ.

ಆ) ಕಲಘಟಗಿ ಕ್ಷೇತ್ರಕ್ಕೆ ಸಮಗ್ರ ಬಾಲವಿಕಾಸ ಯೋಜನೆಯನ್ನು ಏಳನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ವಿಸ್ತರಿಸಲು ಉದ್ದೇಶಿಸಲಾಗಿದೆ.

ತಹಸೀಲ್‌ದಾರರುಗಳ ವರ್ಗಾವಣೆ ಬಗ್ಗೆ,

೧೫೯. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಉತ್ತರ ಕನ್ನಡ ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಕೆಲಸ ಮಾಡುತ್ತಿರುವ ತಹಸೀಲ್ದಾರರುಗಳನ್ನು ಈ ಸಲ ವರ್ಗಾಯಿಸಲಾಗಿದೆ.

೨) ಯಾವ ತಾಲ್ಲೂಕುಗಳಲ್ಲಿಯೂ ತಹಸೀಲ್ದಾರರ ವರ್ಗಾವಣೆ ಈ ವರ್ಷದಲ್ಲಿಯೇ ಮಾಡಿದ್ದನ್ನು ಬದಲಿಸಿ ಅಲ್ಲಿಯೇ ಮುಂದುವರಿಯುವಂತೆ ಮಾಡಲಾಗಿದೆ.

೩) ಈ ರೀತಿ ವರ್ಗಾವಣೆ ತಡೆಹಿಡಿಯಲು ಏನಾದರೂ ಕಾರಣಗಳು ಇವೆಯೆ ?

ಶ್ರೀ ಎಸ್. ಆರ್. ಬೊಮ್ಮಯಿ (ಕಂದಾಯ ಮಂತ್ರಿಗಳು).—

೧) ಭಟ್ಕಳ, ಸಿರಸಿ, ಯಲ್ಲಾಪುರ, ಹೊನ್ನಾವರ, ಅಂಕೋಲ, ಮುಂಡಗೋಡ್ ತಾಲ್ಲೂಕು ತಹಶೀಲ್ದಾರ್‌ಗಳನ್ನು ಈ ವರ್ಷ ವರ್ಗಾಯಿಸಲಾಗಿದೆ.

೨) ಭಟ್ಕಳ್ ತಾಲ್ಲೂಕು ತಹಶೀಲ್ದಾರ್ ವರ್ಗಾವಣೆ ಮಾಡಿದ್ದನ್ನು ರದ್ದುಪಡಿಸಿ ಅವರನ್ನು ಅಲ್ಲಿಯೇ ಮುಂದುವರಿಸಲಾಗಿದೆ,

೩) ಆಡಳಿತಾತ್ಮಕ ಹಿತದೃಷ್ಟಿಯಿಂದ ಭಟಕಲ್ ತಹಶೀಲ್ದಾರ್‌ರವರ ವರ್ಗಾವಣೆಯನ್ನು ರದ್ದುಗೊಳಿಸಿ, ಸದರಿ ತಾಲ್ಲೂಕಿನಲ್ಲಿಯೇ ಮುಂದುವರಿಸಲಾಗಿದೆ.